## ದಿನದ ಪಟ್ಟಿಯಲ್ಲಿ ಸೇರಿಸಿದ ಪ್ರಶ್ನೋತ್ತರ ಪ್ಲಟಿ
## ಚಿನ್ನದ ಪದಕ ಪ್ರಶಸ್ತಿ

ಶ್ರೀ ಬಿ.ಎ. ಉಮರಬ್ಬ (ವಿಟ್ಲ).—ಮಾನ್ಯ ವಾರ್ತಾ, ಯುವಜನ ಸೇವೆ ಕ್ರೀಡಾಂಗಣ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೇ

ಅ) ಇತ್ತೀಚೆಗೆ ರಾಜ್ಯ ಸರಕಾರವು ಪ್ರಶಸ್ತಿ ಪಡೆದ ಚಲನಚಿತ್ರಗಳಿಗೆ ನೀಡಲಾದ ೧೦೦ ಗ್ರಾಂ ತೂಕವಿರುವ ಚಿನ್ನದ ಪದಕದಲ್ಲಿ ಕೇವಲ ಶೇಕಡಾ ೨೦ ಭಾಗ ಮಾತ್ರ ಚಿನ್ನ ಇರುವುದು ಬೆಳಕಿಗೆ ಬಂದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆ ಮಂತ್ರಿಗಳು)—

(ಅ) ಸರ್ಕಾರಕ್ಕೆ ಈ ಬಗ್ಗೆ ಒಂದು ದೂರು ಬಂದಿತ್ತು.

(ಆ) ಈ ದೂರಿನ ಬಗ್ಗೆ ವಿಚಾರಣೆ ನಡೆಸಲಾಯಿತು ವಿಚಾರಣೆಯಿಂದ ಆಪಾದನೆಯಲ್ಲಿ ಹುರುಳಿಲ್ಲ ವೆಂದು ವ್ಯಕ್ತವಾಗಿದೆ.

## ಅಲ್ಪಾವಧಿ ಕಾಲಾವಧಿ ಪ್ರಶ್ನೆ

ವಿಷಯ,—ವಾರದಲ್ಲಿ ೫ ದಿನಗಳ ಕೆಲಸದ ವ್ಯವಸ್ಥೆಯನ್ನು ರಾಜ್ಯ ಸರ್ಕಾರದ ಕಚೇರಿಗಳಲ್ಲಿ ಜಾರಿಗೆ ತಂದಿರುವುದರಿಂದ ದಿನಗೂಲಿಯ ಮೇಲೆ ಕೆಲಸ ಮಾಡುವ ನೌಕರರಿಗೆ ಆಗುತ್ತಿರುವ ನಷ್ಟ.

೩ (೩) ಶ್ರೀ ಕೆ. ವಿ. ರವೀಂದ್ರನಾಥ ಬಾಬು (ಕೊಟ್ಟೂರು) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ.—

(ಅ) ೧೯೮೩ನೇ ಆಗಸ್ಟ್ ೫ ರಿಂದ ಐದು ದಿನಗಳ ವಾರ ಜಾರಿಗೆ ಬಂದಿರುವುದು ನಿಜವಲ್ಲವೆ.

(ಆ) ಸರ್ಕಾರದಲ್ಲಿ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ಜನರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

(ಇ) ದಿನಗೂಲಿ ನೌಕರರು ನಷ್ಟಕ್ಕೊಳಗಾಗಿರುವುದು ನಿಜವಲ್ಲವೆ,

(ಈ) ಹಾಗಿದ್ದಲ್ಲಿ, ನಷ್ಟ ಪರಿಹರಿಸಲು ಅವರುಗಳ ಕೂಲಿಯನ್ನು ಹೆಚ್ಚಿಸಲು ಸರ್ಕಾರದವರು ಆಲೋಚಿಸುವರೇ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

(ಅ) ೫-೮-೮೩ರಿಂದ ವಾರದಲ್ಲಿ ೫ ದಿನ ಕೆಲಸದ ವ್ಯವಸ್ಥೆಯನ್ನು ಜಾರಿಗೆತಂದಿದೆ.

(ಆ) ಹೌದು

(ಇ) ಹೌದು, ಕಚೇರಿಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಸ್ವಲ್ಪ ತೊಂದರೆಯಾಗಿರಬಹುದು.

(ಈ) ಈ ವಿಚಾರ ಪರಿಶೀಲನೆಯಲ್ಲಿದೆ.

ದಿನಗೂಲಿ ಮಾಡತಕ್ಕವರಿಗೆ ಒಂದು ದಿವಸದ ಕೆಲಸ ಕಡಿಮೆಯಾಗುತ್ತದೆ. ಅದರ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆ ಐದು ದಿವಸ ಕೆಲಸ ಮಾಡಿದರೂ ಕೂಡ ಆರು ದಿವಸದ ಸಂಬಳ ಕೊಡುವೇಕೆ ಎಂಬ ಬಗ್ಗೆ ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ,

ಶ್ರೀ ಕೆ.ವಿ. ರವೀಂದ್ರನಾಥ್ ಬಾಬು.—ಅವರ ಸಂಬಳ ಜಾಸ್ತಿ ಮಾಡುವ ಬಗ್ಗೆ ಅಥವಾ ಏನಾದರೂ ವ್ಯವಸ್ಥೆ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೀರಾ ಯಾವಾಗ ತೀರ್ಮಾನ ಮಾಡುತ್ತೀರಿ?